ಶ್ರೀ ಎಸ್. ಆರ್. ಬೊಮ್ಮಾಯಿ.—ಬರಗಾಲ ಎಂದು ಘೋಷಣೆಯನ್ನು ಮಾಡಿದಾಗ ಆ ವರ್ಷದ ಕಂದಾಯವನ್ನು ವಸೂಲ್ಮಾಡುವುದನ್ನು ಮನ್ನಾ ಮಾಡುತ್ತೇವೆ. ಎಲ್ಲಿ ೨೫ ಪರ್ಸೆಂಟ್‌ಗಿಂತ ಕಡಿಮೆ ಬೆಳೆಯಾಗುತ್ತದೆ ಆ ಪ್ರದೇಶದಲ್ಲಿ ಕಂದಾಯವನ್ನು ಮನ್ನಾ ಮಾಡುತ್ತೇವೆ.

ಶಿಶುಪಾಲನಾ ಕೇಂದ್ರಗಳ ಸ್ಥಾಪನೆ

೧೭೦೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕಿನಲ್ಲಿ ಶಿಶುಪಾಲನಾ ಕೇಂದ್ರಗಳಿರುವ ಗ್ರಾಮಗಳಾವುವು ?

ಆ) ಸದರಿ ಕೇಂದ್ರಗಳನ್ನು ಮಂಜೂರು ಮಾಡಲು ಕುನ್ನಾಲ, ನಿಟ್ಟೂರು ಕಡಬ, ಸಿ.ಎಸ್.ಪುರ ಹಾಗೂ ಗೋಪಾಲಪುರ ಗ್ರಾಮದ ಸಾರ್ವಜನಿಕರಿಂದ ಮನವಿ ಬಂದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಪ್ರಾರಂಭ ಮಾಡುವುದು ಯಾವಾಗ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಗುಬ್ಬಿ ತಾಲ್ಲೂಕಿನ ಗೊಲ್ಲಹಳ್ಳಿ, ಬೇವತ್ತ, ಕಡಬ ಮತ್ತು ಬೀದರ್ ಗ್ರಾಮಗಳಲ್ಲಿ ಶಿಶುಪಾಲನಾ ಕೇಂದ್ರಗಳು ನಡೆಯುತ್ತಿವೆ.

ಆ) ಮನವಿ ಬಂದಿರುವುದಿಲ್ಲ.

ಇ) ಹೊಸದಾಗಿ ಶಿಶುಪಾಲನಾ ಕೇಂದ್ರ ಪ್ರಾರಂಭ ಮಾಡಲು ಪ್ರಸ್ತಾವನೆಗಳು ಬಂದಾಗ ಈ ಬಗ್ಗೆ ಪರಿಶೀಲಿಸಿ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಕುನ್ನಾಲ, ನಿಟ್ಟೂರು ಮಂಡಲ ಪಂಚಾಯಿತಿ ಕಲ್ಲೂರು, ಸಿ.ಎಸ್.ಪುರ, ಗೋಪಾಲ ಪುರ ಮಂಡಲ ಪಂಚಾತಿಯಲ್ಲಿ ರೆಸಲ್ಯೂಷನ್ ಮಾಡಿ ನಿಮ್ಮ ಇಲಾಖೆಗೆ ಕಳುಹಿಸಿದ್ದಾರೆ. ಅದಕ್ಕೆ ನಾನು ಕೂಡ ಕವರಿಂಗ್ ಲೆಟರ್‌ನ್ನು ಬರೆದಿದ್ದೇನೆ. ಇಲಾಖೆಯ ಬೇಡಿಕೆ ಬಂದಾಗ ಇದಕ್ಕೆ ಉತ್ತರ ಹೇಳುತ್ತೇನೆಂದು ತಾವು ಹೇಳುವುದಕ್ಕೆ ಬದಲಾಗಿ, ನಾನೇ ಈಗ ಕೇಳುತ್ತಿದ್ದೇನೆ, ತಾವು ಇದನ್ನು ಯಾವಾಗ ಮಂಜೂರು ಮಾಡಿಕೊಡುತ್ತೀರೆಂಬುದನ್ನು ಹೇಳಬೇಕು.

ಶ್ರೀ ಜಿ. ಬಸವಣ್ಣಪ್ಪ.— ಈ ಕೆಲಸಕಾರ್ಯಗಳು ತಾ. ೧-೪-೮೭ ರಿಂದ ಜಿಲ್ಲಾಪರಿಷತ್ತಿಗೆ ವರ್ಗಾವಣೆಯಾಗಿರುತ್ತವೆ. ನಮಗೆ ಏನಾದರೂ ಆರ್ಜಿಗಳು ಬಂದರೆ ನಾವು ಕೂಡ ಅವುಗಳನ್ನು ಅಲ್ಲಿಗೇ ಕಳುಹಿಸಿಕೊಡುತ್ತೇವೆ. ನಿಮ್ಮ ಪರವಾಗಿ ನಾವು ಕೂಡ ಜಿಲ್ಲಾ ಪರಿಷತ್ತಿನವರಿಗೆ ತಿಳಿಸಿ ಇವುಗಳನ್ನು ಮಂಜೂರು ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶಿರಾ ತಾಲ್ಲೂಕಿನಲ್ಲಿ ಕಲ್ಲು ಮಳೆಯಿಂದ ಉಂಟಾದ ಬೆಳೆಯ ನಾಶದ ಬಗ್ಗೆ

೧೮೪೫. ಶ್ರೀ ಸಿ. ಪಿ. ಮೂಡಲಗಿರಿಯಪ್ಪ, (ಶಿರಾ).—ಮಾನ್ಯ ಕಂದಾಯ ಯೋಜನಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿರಾ ತಾಲ್ಲೂಕಿನಲ್ಲಿ ತಾರೀಖು ೨೪ನೇ ಏಪ್ರಿಲ್ ೮೮ ರಂದು ಅಲೇಕಲ್ಲು ಮಳೆ ಬಿದ್ದು ಪರಿಣಾಮವಾಗಿ ರೈತರು ಲಕ್ಷಾಂತರ ರೂಪಾಯಿ ಬೆಳೆಯು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಪರಿಹಾರವನ್ನೊದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಹೌದು